ಕರ್ನಾಟಕ ಸರ್ಕಾರ

(ಪಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ : 252/2022**

**ಫ್ರಾಸಾ- 12 ಚಾಸಾ- 12**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಅಭಿನಂದನ್ |
| ತಂದೆಯ ಹೆಸರುಃ | : | ಎನ್ ಎಂ ಚಂದ್ರಶೇಖರ್ |
| ವಯಸ್ಸುಃ | : | 45 ವರ್ಷ |
| ಉದ್ಯೋಗಃ | : | ವ್ಯವಸಾಯ |
| ವಾಸ | : | ಕಿತ್ತಗಳಲೆ ಗ್ರಾಮ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:28-07-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನನ್ನ ಮನೆ ಕಿತ್ತಗಳಲೆ ಗ್ರಾಮದಲ್ಲಿ ಇರುತ್ತದೆ. 2022ರಲ್ಲಿ ನಾನು ಅಲ್ಲಿ ಮನೆ ಕಟ್ಟಿಲ್ಲ. ಆನಂದ್ ಎಂಬುವವರು ಯಾರೆಂದು ನನಗೆ ಗೊತ್ತಿಲ್ಲ. ಆರೋಪಿತರು ಷಣ್ಮುಖ ಎಂಬುವವರ ಮನೆಯಲ್ಲಿ ಗಾರೆ ಕೆಲಸ ಮಾಡುತ್ತಿದ್ದರು. ಅವರ ಬಳಿ 3 ಜನ ಕೆಲಸಕ್ಕಿದ್ದರು, ಅವರ ಹೆಸರು ಗೊತ್ತಿಲ್ಲ. ಈ ಕೇಸಿನ ಸಂಬಂಧವಾಗಿ ಪೊಲೀಸರು ನನ್ನನ್ನು ಹಾಸನ ಸರ್ಕಾರಿ ಆಸ್ಪತ್ರೆಗೆ ಕರೆಸಿಲ್ಲ. ಅಲ್ಲಿ ಶವಾಗಾರದಲ್ಲಿ ನಾನು ಮೃತ ಆನಂದರವರ ಶವವನ್ನು ನೋಡಿಲ್ಲ. ಅಲ್ಲಿ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

ಈಗ ತೋರಿಸಿದ ನಿಪಿ-1ರಲ್ಲಿರುವ ರುಜು ನನ್ನದೆ. ಸದರಿ ಸಹಿಯನ್ನು ನಿಪಿ-14(ಬಿ) ಎಂದು ಗುರುತಿಸಲಾಯಿತು. ಅದನ್ನು ಕೊಲೆಯಾದ ಸ್ಥಳದಲ್ಲಿ ಹಾಕಿರುತ್ತೇನೆ. ಅಲ್ಲಿ ಕೆಲಸದವನ ಕೊಲೆಯಾಗಿತ್ತು. ಆತನ ಹೆಸರು ಗೊತ್ತಿಲ್ಲ. ಅಲ್ಲಿ ಪೊಲೀಸರು ನನ್ನ ಸಮಕ್ಷಮ ಎಂ.ಒ.2 ರಿಂದ

6ನ್ನು ವಶಪಡಿಸಿಕೊಂಡಿಲ್ಲ. ನಾನು ಅವುಗಳನ್ನು ಸ್ಥಳದಲ್ಲಿ ನೋಡಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ಮೃತ ಆನಂದ ನನ್ನ ಹೊಸಮನೆಯ ಗಾರೆಕೆಲಸ ಮಾಡಿದ್ದನು, ಆತ ಆರೋಪಿತರ ಕೈಕೆಳಗೆ ಕೆಲಸ ಮಾಡಿಕೊಂಡಿದ್ದ ಎಂದರೆ ಸರಿಯಲ್ಲ. ಆತನು ಉತ್ತರಪ್ರದೇಶದವನು ಎಂದು ನನಗೆ ತಿಳಿದಿತ್ತು ಎಂದರೆ ಸಾಕ್ಷಿಯು ಆ ರೀತಿ ಮಾತನಾಡುತ್ತಿದ್ದರು ಎನ್ನುತ್ತಾರೆ. ಆರೋಪಿತರು ಆ ಸಮಯದಲ್ಲಿ ಮೇಸ್ತ್ರಿಯಾಗಿದ್ದರು ಎಂದರೆ ಸರಿ.

ದಿನಾಂಕ 4-6-2022ರಂದು ಮೃತ ಆನಂದ ನೀಲಕಂಠ ರವರ ಹೊಸಮನೆ ಪೌಂಡೇಶನ್ ಕೆಲಸ ಮಾಡುತ್ತಿದ್ದರು, ಸಂಜೆ ಷಣ್ಮುಖರವರ ಲೈನ್ಮನೆಯಲ್ಲಿ ಹೋಗಿ ಉಳಿದುಕೊಂಡಿದ್ದ ಎನ್ನುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿ. 5-6-22ರಂದು ಬೆಳಿಗ್ಗೆ 8ಗಂಟೆ ಸಮಯದಲ್ಲಿ ನಾನು ಷಣ್ಮುಖರವರ ಲೈನ್ಮನೆ ಹತ್ತಿರ ಹೋದಾಗ ಮೃತ ಆನಂದ ಫೌಂಡೇಶನ್ ಪಕ್ಕದಲ್ಲಿ ಸತ್ತು ಬಿದ್ದಿದ್ದ ಅದನ್ನು ನಾನು ನೋಡಿದೆ ಎಂದರೆ ಸರಿಯಲ್ಲ. ಗಾರೆಮೇಸ್ತ್ರಿ ಸತೀಶ ಮತ್ತು ಇತರು ಮೂರು ಜನರು ಷಣ್ಮುಖರವರ ಲೈನ್ಮನೆಯಲ್ಲಿ ಮಲಗಿದ್ದರು, ಅವರನ್ನು ಷಣ್ಮುಖರವರು ಎಬ್ಬಿಸಿ ಆನಂದ ಹೊರಗಡೆ ಫೌಂಡೇಶನ್ ಬಳಿ ಸತ್ತು ಬಿದ್ದಿದ್ದಾನೆಂದು ತಿಳಿಸಿದರು ಎಂದರೆ ಸರಿಯಲ್ಲ. ಆಗ ಸತೀಶ ಮತ್ತು ಇತರರು ಆನಂದರನ್ನು ಎಬ್ಬಿಸಲು ಪ್ರಯತ್ನ ಮಾಡಿದಾಗ ಆತನು ಏಳಲಿಲ್ಲ, ಅಲ್ಲಿಯೇ ಸತ್ತು ಹೋಗಿದ್ದನು ಎಂದರೆ ಸರಿಯಲ್ಲ. ನಂತರ ಷಣ್ಮುಖರವರು ಸಂತೋಷ್ ಎಂಬುವವರ ಆಟೋದಲ್ಲಿ ಅವರನ್ನು ಆಸ್ಪತ್ತೆಗೆ ಸತೀಶ ಮತ್ತು ಇತರರ ಜೊತೆಗೆ ಕಳುಹಿಸಿಕೊಟ್ಟರು ಎನ್ನುವ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ. ಅಲ್ಲಿ

ವೈದರು ಪರಿಶೀಲಿಸಿ ಆತ ಮೃತಪಟ್ಟಿರುವುದಾಗಿ ತಿಳಿಸಿದರು ಈ ವಿಚಾರವನ್ನು ಆಟೋಚಾಲಕ ಷಣ್ಮುಖರವರಿಗೆ ತಿಳಿಸಿದಾಗ ಸದರಿಯವರು ಆಟೋಚಾಲಕರಿಗೆ ಮನೆ ಹತ್ತಿರ ಬರಬೇಡ ಅಲ್ಲೇ ರಸ್ತೆ ಬಳಿ ನಿಲ್ಲಿಸಿಕೊಂಡಿರು ಅಲ್ಲಿಗೇ ಬರುತ್ತೇನೆಂದ ಹೇಳಿ ತಿಳಿಸಿದರು ಎಂದರೆ ಸರಿಯಲ್ಲ. ನಂತರ ರಕ್ತಸಂಬಂಧಿಕರು ಯಾರು ಬಾರದೇ ಇದ್ದುದರಿಂದ ಷಣ್ಮುಖರವರೇ ದೂರು ಕೊಟ್ಟರೆಂದು ತಿಳಿಯಿತು ಎಂದರೆ ಸರಿಯಲ್ಲ. ಆನಂದನ ಸಾವಿನ ಬಗ್ಗೆ ಅನುಮಾನವಿದೆ ಎಂದು ನಾನು ಪೊಲೀಸರ ಮುಂದೆ ಶವಾಗಾರದಲ್ಲಿ ಈಗ ನನಗೆಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯ ಭಾಗವನ್ನು ನಿಪಿ-15 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ9-6-2022ರಂದು ಪೊಲೀಸರು ನನ್ನನ್ನು ಕಿತ್ತಗಳಲೆ ಗ್ರಾಮದ ಸದಾನಂದ ಆಲಿಯಾಸ್ ಷಣ್ಮುಖ ಇವರ ಲೈನ್ಮನೆಯ ದಕ್ಷಿಣ ಭಾಗದಲ್ಲಿರುವ ಲೈನ್ಮನೆಯ ಮಧ್ಯಭಾಗಕ್ಕೆ ಬಂದಾಗ ಆರೋಪಿ ಕೂಡ ಅವರ ಜೊತೆಇದ್ದರು, ಅವರೇ ಸ್ಥಳ ತೋರಿಸಿದ್ದು ಎಂದರೆ ಸರಿ. ಅಲ್ಲಿ ಸ್ಥಳದಿಂದ ಆರೋಪಿಯು ಎಂ.ಒ.2 ರಿಂದ 4 ಬಿದ್ದಿತ್ತು, ಅದನ್ನು ಆರೋಪಿತರು ತೋರಿಸಿದರು ಎಂದರೆ ನಾನು ಗಮನಿಸಲಿಲ್ಲ. ಅದನ್ನು ಪೊಲೀಸರು ಪರಿಶೀಲಿಸಿ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ತಾನು ಆರೋಪಿಯನ್ನು ಕೊಲೆ ಮಾಡಿ ಆ ಜಾಗದಲ್ಲಿ ಹಾಕಿದ್ದು ಎಂದು ಸ್ಥಳವನ್ನು ತೋರಿಸಿದ ಮೇರೆಗೆ ಪೊಲೀಸರು ನನ್ನನ್ನು ಆರೋಪಿತರು ಹೇಳಿದಂತೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ಅಲ್ಲಿ ಪರಿಶೀಲಿಸಿ ಸ್ಥಳದಲ್ಲಿ ಬಿದ್ದಿದ್ದಂತಹ ರಕ್ತರಹಿತ ಹಾಗೂ ರಕ್ತಸಹಿತ ಮಣ್ಣುನ್ನು ಎಂ.ಒ.5 ಮತ್ತು 6ರಂತೆ ವಶಪಡಿಸಿಕೊಂಡು ನಿಪಿ-14ರಂತೆ ಮಹಜರು ಮಾಡಿದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ಅದಕ್ಕೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ</u>**

ಇಲ್ಲ ಎಂದು ಹೇಳುತ್ತಾರೆ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**